ಘೋಷಣೆ ಮತ್ತೆ ಮೊಳಗಿತ್ತು.

'ನ್ಯಾಯ ಬೇಕು... ಬಿಡುಗಡೆ ಬಿಡುಗಡೆ... ಸೆರೆ ಹಿಡಿದವರ ಬಿಡುಗಡೆ... ನೌಕರಿ ನೌಕರಿ...'

ಹನ್ನಾ ನಿಯಂತ್ರಣ ಕೊಠಡಿಯ ಸಂಪರ್ಕ ಸಾಧಿಸಿ ಎಂ.ಪಿ. ವಾಕಿಯಲ್ಲಿ ವಿಷಯ ಅರುಹಿದ ಕೆಲವೇ ನಿಮಿಷಗಳಲ್ಲಿ ಏರ್ ವ್ಯಾನ್‌ನಲ್ಲಿ ಬಂದಿಳಿದ ರೊಬೋ ಕಾಪ್‌ಗಳು ಪ್ರತಿಭಟನೆಯಲ್ಲಿ ನಿರತರಾದವರನ್ನು ಬಲವಂತವಾಗಿ ಏರ್‌ಲಿಫ್ಟ್ ಮಾಡಿ ವಿಚಾರಣಾ ಕೇಂದ್ರಕ್ಕೆ ಕರೆದೊಯ್ಯುವಲ್ಲಿ ಯಶಸ್ವಿಯಾಗಿದ್ದವು.

ಇಷ್ಟೊತ್ತಿಗಾಗಲೇ ಬಾನಂಚಲ್ಲಿ ಬೆಳಕು ಮೂಡತೊಡಗಿ ಹನ್ನಾ ನಡೆದ ವಿಚಾರವನ್ನು ಎಂ.ಪಿ. ವಾಕಿಯಲ್ಲಿ ಕಮೀಷನರ್ ಅವರಿಗೆ ವರದಿ ಒಪ್ಪಿಸಿದ್ದಳು. ತನ್ನ ಶಿಫ್ಟ್ ಮುಗಿಯುವ ಹಂತದಲ್ಲಿ ಮಧ್ಯಂತರ ಶಿಫ್ಟ್‌ವೊಂದಿದ್ದು ಬೆಳಗಿನ ಶಿಫ್ಟ್‌ಗೆ ಬರುವ ಸಂಚಾರ ವಾರ್ಡನ್‌ಗಿಂತ ಮುಂಚಿತವಾಗಿ, ಅರ್ಥಾತ್ ಬೆಳಗಿನ ಜಾವ ಹಾಗೂ ಸೂರ್ಯ ಮೇಲೆದ್ದ ವೇಳೆಯ ಶಿಫ್ಟ್ ಬದಲಾವಣೆಯ ವೇಳೆ ಓರ್ವ ಸಂಚಾರ ವಾರ್ಡನ್ ಬರುವವರಾದ್ದರಿಂದ ಹನ್ನಾ ಹೊರಡಲು ಅನುವಾದಳು. ಈ ಮಧ್ಯೆ ತನ್ನ ಇಬ್ಬರು ರೊಬೋ ಕಾಪ್‌ಗಳ ಚಾರ್ಜ್‌ನ್ನು ತನ್ನ ಸ್ಥಾನಕ್ಕೆ ಬಂದವರಿಗೆ ಒಪ್ಪಿಸುವುದನ್ನು ಮರೆಯಲಿಲ್ಲ.

***

ಹನ್ನಾಳಿಗೆ ಅಂದು ಮೈ ಜಡವಾದಂತೆನಿಸಿ ಕಚೇರಿಯ ಕೆಲಸವನ್ನು ಮನೆಯಿಂದಲೇ ಮಾಡಿದರಾಯ್ತೆಂದು ನಿರ್ಧರಿಸಿದಳು. ತನ್ನ ಸ್ಟಡಿ ಟೇಬಲ್ ಮೇಲೆ ಅಂತರ್ಜಾಲದ ಸಂಪರ್ಕವಿದ್ದ 'ಕಂಪ್ಯೂಜೆಕ್ಟರ್' ಉಪಕರಣ ಬಿಂಬಿಸಿದ ಕೀಪ್ಯಾಡ್ ಮೇಲೆ ಕೈಯಾಡಿಸುತ್ತಾ ಸ್ಕ್ರೀನ್ ಮೇಲಿನ ವಿವಿಧ ಕ್ರಮ ಯೋಜನೆಗಳಲ್ಲಿ ನಿರತಳಾಗಿರುವಂತೆಯೇ, ಅವಳ 'ಎಂ.ಪಿ. ವಾಕಿ' ಬೀಪ್ ಸದ್ದಿನೊಂದಿಗೆ ಅವಳನ್ನು ಎಚ್ಚರಿಸಿತ್ತು. ಅದರ ಮೇಲಿನ ಮುಖ್ಯಾಂಶದ ಮೇಲೆ ಕಣ್ಣಾಡಿಸುತ್ತಲೇ ಮತ್ತಷ್ಟು ವಿವರ ಪಡೆಯಲು ಒಂದು ಒತ್ತು ಗುಂಡಿಯನ್ನು ಒತ್ತುವುದರ ಮೂಲಕ ಎಂ.ಪಿ. ವಾಕಿಯ ಮಾನಿಟರ್ ಅನ್ನು ವಿಸ್ತರಿಸಿ ನೇರವಾಗಿ ಘಟನಾವಳಿಗಳನ್ನು ವೀಕ್ಷಿಸತೊಡಗಿದಳು.

ನಗರದ ವಿಚಾರಣಾ ಕೇಂದ್ರದ ಪ್ರವೇಶ ದ್ವಾರದಲ್ಲಿ ಜಮಾಯಿಸಿದ ಜನಸಂದಣಿಯನ್ನು ನಿಯಂತ್ರಿಸಲು ಭದ್ರತಾ ರೊಬೋಗಳು ಸಜ್ಜಾಗಿ ಒಳಪ್ರವೇಶಿಸುವವರ ಭದ್ರತಾ ತಪಾಸಣೆಯ ಬಳಿಕವೇ ಒಳಹೋಗಬಹುದೆಂದು ಆದೇಶವಿತ್ತಿದ್ದರು. ಬಳಿಕ ಸಾಲುಸಾಲಾಗಿ ಆ ಮಂದಿ ಒಳಸಾಗುವಾಗ ಇಡೀ ಕೋಣೆಯೇ ಅವರನ್ನು ತಪಾಸಣೆಗೈಯುತ್ತಿರುವಂತೆ ಸುತ್ತಲೂ ವೀಕ್ಷಿಸುತ್ತಾ ತಪಾಸಣಾ ಕೋಣೆಯಿಂದ ತಮ್ಮನ್ನು ಕರೆದೊಯ್ದ ರೊಬೋ ಕಾಪ್‌ಗಳು ತೋರಿಸಿದ ಗೋಲದಾಕಾರದ ನಿರ್ದಿಷ್ಟ ಹಾಲ್‌ನಲ್ಲಿ ಆಸೀನರಾಗಿದ್ದರು.

ಅವರನ್ನು ನಿಯಂತ್ರಿಸಲು ನಿಯೋಜಿತರಾದ ರೊಬೋ ಕಾಪ್‌ಗಳು ಹಿಂದಿನ ಆಸನಗಳಲ್ಲಿ ಜಾಗವನ್ನು ಕಂಡುಕೊಂಡ ನಂತರ ವಿಶೇಷ ವಿಚಾರಣಾಧಿಕಾರಿಯ ಆಗಮನವಾಗಿ ಸ್ವಲ್ಪ ಎತ್ತರದ ವೇದಿಕೆಯ ಮೇಲಿದ್ದ ಆಸನದಲ್ಲಿ ಆಸೀನರಾದೊಡನೆ ಮಾತು ಶುರುಮಾಡಿದ್ದರು.

'ಬಹಳ ದಿನಗಳಿಂದ ತಮ್ಮ ಅಹವಾಲುಗಳನ್ನು ಅವಕಾಶ ಸಿಕ್ಕಿದಾಗೆಲ್ಲ ತೋಡಿಕೊಂಡಿದ್ದೀರಿ. ನಿಮ್ಮ ನೋವಿಗೆ ನಮ್ಮ ತುಡಿತವಿದೆ. ಆದರೆ ಆಕ್ರೋಶವನ್ನು ವ್ಯಕ್ತಪಡಿಸುವ ಭರದಲ್ಲಿ ನಿಯಮಗಳನ್ನು ಗಾಳಿಗೆ ತೂರಿ ಸಾರ್ವಜನಿಕರಿಗೆ ಅನನುಕೂಲ ಉಂಟು ಮಾಡಿದ್ದೀರಿ. ಇದು ಸರಿಯೇ?' ವಿಚಾರಣಾಧಿಕಾರಿ ಸಾವಕಾಶವಾಗಿ ಸಮಾಧಾನದಿಂದ ಮಾತನಾಡುತ್ತಿದ್ದರು.

'ಇದು ಸರಿಯೇ ಎಂದು ಹೇಗೆ ನಮ್ಮನ್ನು ಕೇಳುತ್ತೀರಿ ಆಫೀಸರ್... ನೋವುಂಡವರು ನಾವು. ನಮ್ಮ ಸ್ಥಿತಿ ಹೇಗಿದೆ ಎಂಬುದು ನಿಮಗೆ ಮನವರಿಕೆಯಾಗಿದೆ ಎಂದುಕೊಂಡಿದ್ದೇವೆ...' ಅವರಲ್ಲೊಬ್ಬ ಎದ್ದು ನಿಂತು ತನ್ನ ಅಸ್ತಿತ್ವವನ್ನು ಸಾಬೀತುಪಡಿಸಿದ್ದ.

'ನಿಮ್ಮ ಪರಿಚಯ ಹೇಳುವಿರಾ...' ವಿಚಾರಣಾಧಿಕಾರಿ ಪ್ರಶ್ನಿಸಿದ.

'ನನ್ನ ಹೆಸರು ರೇವಾ, ನಾನು ಈ ಹಿಂದೆ 'ಸೈಲೋ' ಮೆಕಾನಿಕಲ್ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ. ರಸ್ತೆ ಅಪಘಾತವೊಂದರಲ್ಲಿ ನನ್ನ ಎರಡೂ ಕೈಗಳು ವಾಹನದ ಚಕ್ರಗಳಿಗೆ ಸಿಲುಕಿ ಜರ್ಜರಿತಗೊಂಡು ನಾನೀಗ ಕೃತಕ ಕೈಗಳನ್ನು ಅಳವಡಿಸಿಕೊಂಡಿರುವೆ. ನಾನು ವಿದ್ಯಾಭ್ಯಾಸ ಮಾಡಿದ ಕ್ಷೇತ್ರದಲ್ಲಿ ಈಗ ಉದ್ಯೋಗ ಸಿಗುವುದು ಕಷ್ಟವಾಗಿದೆ. ಏಕೆಂದರೆ ಈ ಪ್ರಕರಣದ ನಂತರ ನನ್ನ ಸಂಸ್ಥೆಯಲ್ಲಿ ರೊಬೋ ಒಂದು ನನ್ನ ಸ್ಥಾನವನ್ನಾಕ್ರಮಿಸಿದೆ. ನಾನೀಗ ನಿರುದ್ಯೋಗಿ. ಕೆಲವೊಂದೆಡೆ ಅಲ್ಪ ಸ್ವಲ್ಪ ಫ್ರೀಲಾನ್ಸ್ ಕೆಲಸವನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇನೆ...'

'ಸರಿ... ಈ ರೀತಿ ಸಂಘಟಿತರಾಗಿ ಹೋರಾಟ ಮಾಡಿದರೆ ನಿಮಗೆ ಪ್ರಯೋಜನವಿದೆಯೇ? ಒಬ್ಬೊಬ್ಬರದೂ ಒಂದೊಂದು ಸಮಸ್ಯೆ ಇರಬಹುದಲ್ಲವೇ?'

'ಆಫೀಸರ್... ಒಬ್ಬೊಬ್ಬರದೂ ಭಿನ್ನ ಸಮಸ್ಯೆಯಾದರೂ ನಮ್ಮ ಸಮಸ್ಯೆಗೆ ಮೂಲ ಕಾರಣ ಒಂದೇ ಆಗಿದೆ...' ಎಂದು ಮತ್ತೊಬ್ಬ ಎದ್ದು ನಿಂತು ಹಿಂದೆಡೆ ಕುಳಿತ್ತಿದ್ದ ರೊಬೋಗಳೆಡೆ ಬೆರಳು ತೋರಿಸಿದ.

'ರೊಬೋಗಳು ನಿಮಗೇನಾದರೂ ಹಾನಿ ಉಂಟು ಮಾಡಿರುವರೇ? ದೈಹಿಕವಾಗಿ ಅಥವಾ ಮಾನಸಿಕವಾಗಿ...? ಅವರುಗಳೆಲ್ಲಾ ನಿಯೋಜಿತ ಕಾರ್ಯ ನಿರ್ವಹಿಸುತ್ತಿರುವರಷ್ಟೇ. ಯಾಂತ್ರಿಕ ಕೆಲಸಗಳು, ಹೆಚ್ಚು ಅಪಾಯ ಇರುವಂತಹ ಕೆಲಸಗಳು ಹಾಗೂ ಮನುಷ್ಯ ವಿಫಲವಾದೆಡೆಯಷ್ಟೇ ಅವುಗಳನ್ನು ಬಳಸಲಾಗುತ್ತಿದೆ...'

ಪರಿಸ್ಥಿತಿ ತಿಳಿಗೊಳಿಸಲು ವಿಚಾರಣಾಧಿಕಾರಿ ನುಡಿದಿದ್ದರಾದರೂ ಅದು ಬೆಂಕಿಯ ಮೇಲೆ ತುಪ್ಪ ಸುರಿದಂತಾಗಿತ್ತು.

'ಇಂದೆಂತಹ ವ್ಯಾಖ್ಯಾನ ಆಫೀಸರ್... ನಮ್ಮಲ್ಲೊಂದು ಜೀವವಿದೆ. ತಪ್ಪು ಮಾಡುವುದು ಮನುಜ ಸಹಜ ಗುಣ. ಹಾಗೆಂದು ನಮ್ಮನ್ನೆಲ್ಲ ಲಾಭಕೋರ ಸಂಸ್ಥೆಗಳ ಮಾಲೀಕರ ಬಯಕೆಯಂತೆ ಹೇಗೆಂದರೆ ಹಾಗೆ ನಿರುದ್ಯೋಗಿಗಳನ್ನಾಗಿಸಿದರೆ ಹೇಗೆ...' ರೇಗಿದನಾತ.

'ಆಫೀಸರ್... ನಮ್ಮ ವಿವೇಚನೆ ಹಾಗೂ ಬುದ್ಧಿಮತ್ತೆಯನ್ನು ಈ ರೊಬೋಗಳಲ್ಲಿ ಅಳವಡಿಸಲು ಏಕೆ ಪ್ರಯತ್ನಿಸುತ್ತಿರುವಿರಿ?' ಮಗದೊಬ್ಬ ಪ್ರಶ್ನಿಸಿದ.

'ನಾನು ರೊಬೋ ಉತ್ಪಾದನಾ ಸಂಸ್ಥೆಯ ಪ್ರತಿನಿಧಿ ಎಂದು ಭಾವಿಸಿದ್ದೀರಾ? ರೊಬೋ ಉತ್ಪಾದನೆ ಹಾಗೂ ಖರೀದಿ ಅದರ ಮಾಲೀಕರಿಗೆ ಬಿಟ್ಟದ್ದು. ಯಾರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ನಿರ್ಧರಿಸುವುದು ಅವರಿಗೆ ಬಿಟ್ಟದ್ದಾದ್ದರಿಂದ ನಾವು ಅದರಲ್ಲಿ ಹಸ್ತಕ್ಷೇಪ ಮಾಡಲಿಕ್ಕಾಗದು... ನಿಮ್ಮನ್ನು ಇಲ್ಲಿಗೆ ಕರೆಸಿರುವ ಉದ್ದೇಶವೇ ಬೇರೆಯಾಗಿದೆ. ನೀವು ಹಲವಾರೆಡೆ ಪ್ರತಿಭಟನೆಗಳನ್ನು ಕೈಗೊಂಡು ಜನರ ದಿನನಿತ್ಯದ ಕೆಲಸಕಾರ್ಯಗಳಿಗೆ ಅಡ್ಡಿಯನ್ನುಂಟು ಮಾಡುತ್ತಿರುವಿರಿ. ಅಂಗಡಿ ಮುಂಗಟ್ಟೆಗೆ ಹಾನಿ ಎಸಗಿದವರ ಪರವಾಗಿ ಘೋಷಣೆಗಳನ್ನು ಕೂಗುತ್ತಾ ಅವರೊಂದಿಗೆ ಶಾಮೀಲಾಗಿ ಈ ಕೃತ್ಯದಲ್ಲಿ ನಿಮ್ಮ ಪಾತ್ರವೂ ಇದೆ ಎಂದು ಸಾಬೀತುಪಡಿಸಲು ವಿಚಾರಣೆ ಅಗತ್ಯವಿದ್ದು, ಇಲ್ಲಿಗೆ ನಿಮ್ಮನ್ನು ಕರೆಸಲಾಗಿದೆ.'

'ಆಫೀಸರ್, ನಾವು ಇದರಲ್ಲಿ ಶಾಮೀಲಾಗಿದ್ದೇವೆ ಎಂದು ಹೇಗೆ ನಿರ್ಧಾರಕ್ಕೆ ಬರುವಿರಿ. ಕೆಲವು ವ್ಯಕ್ತಿಗಳ ಪರವಾಗಿ ಘೋಷಣೆ ಕೂಗಿದ ಮಾತ್ರಕ್ಕೆ ನಾವು ಅಪರಾಧಿಗಳು ಎನ್ನುವಂತೆ ಮಾತನಾಡುತ್ತಿರುವಿರಿ. ನಾವು ಅವರ ನೋವೇನೆಂದು ಬಲ್ಲೆವು. ಅವರ ಆಕ್ರೋಶವನ್ನು ವ್ಯಕ್ತಪಡಿಸಲು ಅಂಗಡಿ ಮುಂಗಟ್ಟಿನ ಎದುರಿಗಿನ ರೊಬೋ ಪ್ರತಿರೂಪ ಹಾನಿ ಮಾಡಿರಬಹುದು. ಅವರ ಆಕ್ರೋಶ, ಕೋಪ ಅಸಮಾಧಾನ ವ್ಯಕ್ತಪಡಿಸಲು ಬೇರೆ ಮಾರ್ಗಗಳೇನಿವೆ? ಪರಿಸ್ಥಿತಿ ಹಿಂಸಾತ್ಮಕ ರೂಪ ತಾಳಬಹುದೆಂದು ನಮ್ಮನ್ನು ಈಗಷ್ಟೇ ಚರ್ಚೆಗೆ ಕರೆದಿರುವಿರಿ. ಸೆರೆಹಿಡಿದವರನ್ನು ಈ ಮಾತುಕತೆಗೆ ಕರೆಯಿರಿ. ಅವರನ್ನಾಕೆ ಪ್ರತ್ಯೇಕಗೊಳಿಸಿದ್ದೀರಿ?' ಜೋರು ದನಿಯಲ್ಲಿ ಕೂಗಿದ ಮಗದೊಬ್ಬ.

'ನಿಮ್ಮ ಆಕ್ರೋಶ ವ್ಯಕ್ತಪಡಿಸಲು ಪೋಲ್ ಬ್ಯಾಂಕ್‌ಗಳಿವೆ. ಆನ್‌ಲೈನ್ ಮೂಲಕ ಈ ರಾಜ್ಯದ ಮುಖ್ಯಮಂತ್ರಿಗಳವರೆಗೆ ನೀವು ಅಳಲನ್ನು ತೋಡಿಕೊಳ್ಳಬಹುದು. ಆದರೂ ಈ ಅಡ್ಡ ಮಾರ್ಗವನ್ನೇಕೆ ಹಿಡಿದಿರುವಿರಿ? ಬೀ ಮೋರ್ ಓಪನ್ ಆನ್‌ಲೈನ್... ದ್ಯಾನ್ ಆನ್ ರೋಡ್ಸ್...' ಎಂದ ವಿಚಾರಣಾಧಿಕಾರಿ. ಅವನ ಮಾತಿಗೆ ಅಲ್ಲಿ ಸೇರಿದ್ದ ಅರೆ ಮಾನವರ ಪಡೆ ಸಿಡಿದೆದ್ದಿತು. ಅವರೆಲ್ಲಾ ಒಟ್ಟಾಗಿ ಎದ್ದು ನಿಂತು ವಿಚಾರಣಾಧಿಕಾರಿಯ ಮಾತನ್ನು ಖಂಡಿಸತೊಡಗಿದರು.

**ಸಶೇಷ**